# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ – 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶನಿವಾರ, 30ನೇ ಜನವರಿ 2021

*****

**ಸಂಖ್ಯೆ:** 20

ದಿನಾಂಕ:03.02.2021ರಿಂದ 05.02.2021ರವರೆಗೆ ಬೆಂಗಳೂರಿನ ಯಲಹಂಕದ ವಾಯುನೆಲದಲ್ಲಿ ನಡೆಯಲಿರುವ "ಏರೋ ಇಂಡಿಯಾ 2021"ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುವಾಗುವಂತೆ 75 ವಿಐಪಿ ಪಾಸ್‌ಗಳನ್ನು ಇಲಾಖೆಯವರು ಒದಗಿಸಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಕೋವಿಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವುದರಿಂದ, ಭಾಗವಹಿಸಲು ಆಸಕ್ತಿ ಹೊಂದಿರುವ ಮಾನ್ಯ ಸದಸ್ಯರುಗಳು ಭಾಗವಹಿಸುವ ದಿನಕ್ಕೆ 72ಗಂಟೆಗಳ ಮುಂಚಿತವಾಗಿ ಕೋವಿಡ್ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿಕೊಂಡು, ವರದಿಯ ಪ್ರತಿಯನ್ನು ಒದಗಿಸಬೇಕಾಗಿರುತ್ತದೆ.

ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ಅಂತರ್ಜಾಲದಲ್ಲಿ ನೋಂದಾಯಿಸಿಕೊಳ್ಳಲು ಅಂತರ್ಜಾಲ ಲಿಂಕ್‌ನ್ನು ತಮ್ಮ ಇ–ಮೇಲ್‌ಗಳಿಗೆ ಕಳುಹಿಸಲಾಗುತ್ತಿದ್ದು, ದಿನಾಂಕ:31.01.2021ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮನ್ವಯಾಧಿಕಾರಿಯಾದ ಶ್ರೀ ಹೆಚ್.ಎಂ. ಮೋಹನ್‌ಕುಮಾರ್, ಸಿಸ್ಟಂ ಅನಾಲಿಸ್ಟ್ (ಕೊಠಡಿ ಸಂಖ್ಯೆ 153, ವಿಧಾನಸೌಧ, ಬೆಂಗಳೂರು) ಇವರನ್ನು ಸಂಪರ್ಕಿಸಬಹುದೆಂದು ಈ ಮೂಲಕ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,**

www:<u>*//kla.kar.nic.in/council/council.htm*</u>